ಈ ಆಲಿಂಗನ, ಚುಂಬನ ಅಥವಾ ಮೈಥುನದಂಥ ಬಾಹ್ಯ ಆಕರ್ಷಣೆಗಳಲ್ಲೇ ಸಂತೃಪ್ತರಾಗಬಾರದು. ಅಧ್ಯಾತ್ಮದ ನೆಲೆಗೊಯ್ಯದಿದ್ದರೆ ಪ್ರೇಮಕ್ಕೆ ಫ್ರೆಶನೆಸ್ ಇರುವುದಿಲ್ಲ' ಎಂದಳು. 'ಆತ್ಮ–ಅಧ್ಯಾತ್ಮ ಇತ್ಯಾದಿ ದೊಡ್ಡ ದೊಡ್ಡ ಎರೆಗಳನ್ನು ನನ್ನ ಬುದ್ಧಿ ಕಚ್ಚಲಾರದು ಮಾರಾಯ್ತಿ. ನಿನ್ನ ಕಣ್ಣುಗಳಲ್ಲಿ ಪ್ರತಿಫಲಿಸುವ ಗುಲ್‌ಮೊಹರ್ ನೋಡ್ತಾ ಇರಬೇಕು, ನಿನ್ನ ಮಧುರ ತುಟಿಗಳನ್ನು ಚಪ್ಪರಿಸುತ್ತಾ ಇರಬೇಕು... ಹೀಗೆ ಹುಲುಮಾನವನಾದ ನನಗೆ ಇಂಥವೇ ಸಿಂಪಲ್ ಆಸೆಗಳು ಅಷ್ಟೇ!' ಎನ್ನುತ್ತಾ ಅವಳನ್ನು ಅಪ್ಪಿಕೊಂಡ. ಗಾರ್ಡನ್‌ನ ಮಂದ ಬೆಳಕು, ಬಿಸಿಲ ಝಳ ಕಡಿಮೆಯಾಗಿ ತಲೆ ಎತ್ತುತ್ತಿರುವ ಹಸಿರು ಗರಿಕೆಗಳು, ಹೂ ಹೊತ್ತು ನಿಂತಿರುವ ಗುಲ್‌ಮೊಹರ್, ಎಲ್ಲವೂ ಮಾದಕವೇ ಆಗಿದ್ದವು. ಅವಳೆದೆ ಸ್ಪರ್ಶಕ್ಕೆ ಅವನೆದೆ ಭಾರವು ಹೂವಿನಷ್ಟೆ ಹಗುರಗೊಂಡಿತು. ಅವಳ ಹಣೆಯ ಮೇಲಿನ ಮುಂಗುರಳನ್ನು ನೇವರಿಸಿದ. ಕಿವಿಯ ಓಲೆಯನ್ನು ತೂಗಿದ. ಕೊರಳಲ್ಲಿ ಬೆರಳುಗಳನ್ನಾಡಿಸುತ್ತಾ ಮುದ್ದು ಉಕ್ಕಿ ತುಟಿಯನ್ನು ಸವರುವಾಗ ಸುಮಿಯ ಕಣ್ಣುಗಳು ಮುಚ್ಚಿಬಂದವು. ಇನ್ನೇನು ಇಬ್ಬರ ತುಟಿಗಳೂ ಬೆಸೆಯಬೇಕು, ಆಗಲೇ ಆಕೆ ಕಿಟಾರನೆ ಕಿರುಚಿಕೊಂಡದ್ದು!

***

ಲಿಂಗಣ್ಣ, ಶೈಲತ್ತೆ ಮತ್ತು ನಾಗತಿಹಳ್ಳಿಯವರು ಅಲ್ಲಿಗೆ ಧಾವಿಸಿದಾಗ ಸುಮಿ ಇನ್ನೂ ಅರೆಪ್ರಜ್ಞಾವಸ್ಥೆಯಲ್ಲೇ ಇದ್ದಳು. ಪ್ರೀತಂ ಅವಳ ತಲೆಯನ್ನು ತೊಡೆ ಮೇಲಿಟ್ಟು ಸುಮಿ ಸುಮಿ ಎಂದು ಗಲ್ಲ ಅಲುಗಾಡಿಸುತ್ತಿದ್ದ.

ಸುಮಿಯನ್ನು ಅಂಥ ಸ್ಥಿತಿಯಲ್ಲಿ ಕಂಡು ಎಲ್ಲರೂ ಕಂಗಾಲಾದರು. ನಾಗತಿಹಳ್ಳಿಯವರು ಹೋಟೆಲಿಗೆ ಫೋನ್ ಮಾಡಿ ನೀರು ತರಿಸಿದರು. ಲಿಂಗಣ್ಣ ಆತಂಕದಿಂದ ಪ್ರೀತಂನತ್ತ ತಿರುಗಿ 'ಏನಾಯ್ತಲೇ?' ಅಂದರು. ಪ್ರೀತಂನೇ ಕಟು ಮಾತು ಅಂದಿರಬೇಕು, ಏನೋ ಮಾಡಿರಬೇಕು ಎಂಬ ಸಂಶಯ ಅವರಿಗೆ. ಶೈಲತ್ತೆಯತ್ತ ತಿರುಗಿ 'ಬ್ಯಾಡಾ ಅಂತ ಬಡ್ಕೊಂಡ್ನಿ ನಾ, ಕೇಳವಲ್ಲಿ ನೀ? ನನ್ ಮನಸ್ಸಿನ ವಿರುದ್ಧ ಇಲ್ಲಿವರೆಗೂ ಕರೆದ ತಂದಿ ನೀ, ಹಿಂಗ್ ಬಿದ್ದಾಳಲ್ಲ, ನೋಡೀಗ... ಅವಳಿಗೇನಾರ ಆಯ್ತು ಅಂದ್ರೆ, ನಾ ಸುಮ್ನಿರಾಂವ ಅಲ್ಲ, ತಿಳಿರಿ' ಎಂದು ಸಿಟ್ಟು–ಅಳು ಬೆರೆತ ಭಾವದಲ್ಲಿ ಅರಚಾಡುತ್ತಿದ್ದ.

ನಾಗತಿಹಳ್ಳಿಯವರು 'ಒಂದ್ನಿಮಿಷ ಸರ್ ಒಂದ್ನಿಮಿಷ, ಏನೋ ಸೆಕೆಗೆ ಕಣ್ಣು ಕತ್ತಲ ಬಂದಿರಬೇಕು' ಎಂದು ಸಮಾಧಾನ ಮಾಡ್ತಿದ್ದರು. 'ಎಂಥ ಸೆಕೇರಿ? ಸಣ್ಣಾಕಿಂದ ಹೊಲದಾಗ ಅದೆಸ್ಟ್ ಸಲ ನನ್ಜತಿ ಬಿಸಿಲಾಗ ನಡೆದಾಡಿಲ್ಲ ಆಕಿ. ಏನೋ ಘಾತ ಆಗ್ಯೆತಿ' ಎಂದು ಮತ್ತೆ ಪ್ರೀತಂನತ್ತ ಸಂಶಯ ದೃಷ್ಟಿಯಿಂದ ದುರುಗುಟ್ಟಿದರು.

ನಾಗತಿಹಳ್ಳಿಯವರು 'ನೀವು ಹುಡುಗೀನ ಕೂಡು ಹಾಕಿದ್ದೀರಾ. ಅವಳ ಮನಸ್ಸಿಗೆ ಗಾಸಿಯಾಗದೇ ಮತ್ತೇನಾಗುತ್ತೆ. ಶಾಂತವಾಗಿರಿ. ಮೊದ್ಲು ಅವಳು ಎಚ್ಚೆತ್ತುಕೊಳ್ಳಲಿ' ಎಂದು ಸ್ವಲ್ಪ ಖಾರವಾಗಿಯೇ ಹೇಳಿದರು.

ಶೈಲತ್ತೆ ಮುಖಕ್ಕೆ ನೀರು ಚಿಮುಕಿಸಿದ ಮೇಲೆ ಸುಮಿ ಕಣ್ಣು ತೆರೆದಳು. ತಟ್ಟನೆ ಪ್ರೀತಂನ ಕಾಲ ಮೇಲಿಂದೆದ್ದು ಅವನ ಕೈ ಎದೆ ಮುಖ ತಲೆಯನ್ನೆಲ್ಲ ಅವಸರವಸರವಾಗಿ ನೇವರಿಸುತ್ತಾ 'ಹೇ ಪ್ರೀತ್, ನಿಂಗೇನೂ ಆಗಿಲ್ಲ ತಾನೆ?' ಎಂದಳು. ಪ್ರೀತಂ 'ನಂಗೇನಾಗಿಲ್ಲ... ಜಸ್ಟ್ ರಿಲ್ಯಾಕ್ಸ್' ಅಂದ. ಅಪ್ಪ, ಅತ್ತೆ, ನಾಗತಿಹಳ್ಳಿ ಸರ್, ಹೋಟೆಲ್ ಸ್ಟಾಫು ಎಲ್ಲರನ್ನೂ ನೋಡಿ ಸುಮಿ ಎದ್ದು ನಿಂತಳು. ಲಿಂಗಣ್ಣನವರು 'ಏನಾಯ್ತು ಮಗಳೇ?' ಅಂದರು. 'ಏನಿಲ್ಲಪ್ಪಾ, ಸ್ವಲ್ಪ ತಲೆಸುತ್ತು ಬಂತು, ಹೋಗೋಣ ಬನ್ನಿ' ಎಂದು ಮುಂದೆ ಹೋದಳು. ಪ್ರೀತಂ ಅವಳ ಕೈಹಿಡಿದು ಜೊತೆಗೇ ನಡೆದ. ನಾಗತಿಹಳ್ಳಿಯವರು, ಶೈಲತ್ತೆ ಮತ್ತು ಲಿಂಗಣ್ಣ ಹಿಂದಿಂದ ಬಂದರು.

ನಾಗತಿಹಳ್ಳಿಯವರು ಇನ್ನಷ್ಟು ಹಿಂದೆ ಉಳಿದು ತಮ್ಮ ಆಫೀಸಿಗೆ ಫೋನ್ ಮಾಡಿ, 'ಬರಲು ನನಗೆ ಇನ್ನೊಂದೆರಡು ದಿನ ಆಗುತ್ತೆ. ಒಂದ್ ಕೆಲ್ಸ ಮಾಡು, ಫಿಲಮ್ ಚೇಂಬರಿಗೆ ಹೋಗಿ 'ಪ್ರೀತ್‌ಸು' ಹೆಸರನ್ನ ರಿಜಿಸ್ಟ್ರೇಶನ್ ಮಾಡ್ಸು, ನಾಳೇನೆ' ಅಂದರು. ಅವನು 'ಸಾರ್, ಉಪೇಂದ್ರ ಅವರು ಈಗಾಗಲೇ ಆ ಹೆಸರಲ್ಲಿ ಸಿನಿಮಾ ಮಾಡಿ ಆಗಿದೆ, ಮರೆತ್ರಾ?' ಅಂದ. 'ಲೋ, ಅದು ಪ್ರೀತ್ಸೆ. ನಾನು ಹೇಳಿದ್ದು ಪ್ರೀತ್‌ಸು. ವಾಟ್ಸಾಪ್ ಮಾಡ್ತೇನೆ, ಸರಿ ನೋಡ್ಕೋ' ಎಂದರು. ವಾಟ್ಸಾಪ್ ನೋಡಿ ಆತ ಮತ್ತೆ ಫೋನ್ ಮಾಡಿದ. 'ಸಾರ್, ಅದು ಪ್ರೀತಿಸು ಅಥವಾ ಪ್ರೀತ್ಸು ಆಗಬೇಕಲ್ವ? ನೀವು ತ ಹ್ರಸ್ವ ಮಾಡಿದ್ದೀರಲ್ಲ... ಸಾಯಿತಿಗಳಾಗಿ ನೀವೇ ಇಂಗೆ ಕಾಗುಣಿತ ತಪ್ಪು ಮಾಡಿದರೆ ಎಂಗೆ ಸಾರ್?' ಅಂದ. 'ಲೋ ಬೇಕೂಫಾ, ಪ್ರೀತಿ ಪ್ರೇಮದ ಶಬ್ದ ಸಾಲುಗಳಲ್ಲಿ ಕಾಗುಣಿತ, ವ್ಯಾಕರಣಗಳೂ ಪಟ್ಟು ಸಡಿಲುಸುವಷ್ಟು ಉದಾರವಾಗುತ್ತವೆ. ಸಮಸ್ಯೆ ಇರೋದೇ ಈ ಮನುಷ್ಯರಲ್ಲಿ ಕಣೋ' ಎಂದರು. ಆ ಕಡೆಯ ವ್ಯಕ್ತಿ ಸಖತ್ ಕ್‌ಫ್ಯೂಷನ್ನಿನಲ್ಲಿರುವಾಗಲೇ ಫೋನ್ ಕಟ್ ಮಾಡಿದರು.

* * *

ಹೋಟೆಲಿನಲ್ಲಿ ನಿಂಬೆ ಶರಬತ್ತು ಕುಡಿದ ನಂತರ ಸುಮಿ ಮತ್ತೆ ಗೆಲುವಾಗಿದ್ದಳು. 'ಈ ಕೋತಿ ತುಟಿ ಕಚ್ತು ಅಂತ ಹೇಳಿ ನಮ್ಮಪ್ಪನಿಂದ ಗೂಸಾ ತಿನ್ನಿಸಲೇನೋ' ಎಂದಳು, ಪ್ರೀತಂನಿಗಷ್ಟೇ ಕೇಳುವ ತಗ್ಗಿದ ಧ್ವನಿಯಲ್ಲಿ. 'ಓಡಿ ಹೋಗೋಣ್ವಾ?' ಅಂದ್ಳು. 'ಗೌರವಾನ್ವಿತ ಲಿಂಗನಗೌಡ ಪಾಟೀಲರ ಮರ್ಯಾದೆ ತೆಗೆಯಲಾರೆ ಅಂದೆ. ಅಷ್ಟಕ್ಕೇ ಕಿರುಚಿ ಬಿದ್ಬು ಅಂತೇನೆ, ಆಗ?' ಅಂದ. ಹುಡುಗ ಹುಡುಗಿ ಹೀಗೆ ತಮ್ಮ ತಮ್ಮಲ್ಲೇ ವಿನೋದದಲ್ಲಿ ಮಾತಾಡಿಕೊಳ್ಳುತ್ತಿದ್ದರೂ ಗಾರ್ಡನ್ನಿನಲ್ಲಿಯ ಘಟನೆ ಅವರನ್ನು ಒಳಗೊಳಗಿಂದ ಕೊರೆಯತೊಡಗಿತ್ತು. ಲಿಂಗಣ್ಣ ಶೈಲತ್ತೆಯರಲ್ಲೂ ದುಗುಡ ಮುಖದಲ್ಲಿ ಗೋಚರಿಸುತ್ತಿತ್ತು. ನಾಗತಿಹಳ್ಳಿಯವರಿಗೆ ಇಂಥ ಅನಿರೀಕ್ಷಿತಗಳು, ಮನಸ್ಸುಗಳನ್ನು ಕೋಮಲಗೊಳಿಸುವ ಬೆಳ್ಳಿಗೆರೆಗಳು ಎಂಬ ಅಭಿಪ್ರಾಯವಿತ್ತು. ಹಾಗಾಗಿ ಅವರ ಮುಖದಲ್ಲಿ ಎಂದಿನ ಮುಗುಳುನಗುವೇ ಇತ್ತು! ಲಿಂಗಣ್ಣನವರನ್ನು ಇನ್ನಷ್ಟು ಮೃದುಗೊಳಿಸುವ ಈ ಅವಕಾಶವನ್ನು ಬಿಡಬಾರದು ಎಂದು ಯೋಚಿಸುತ್ತಿದ್ದರು.

ಆದರೆ ಈ ಹುಡುಗ ಹುಡುಗಿಯರ ಪ್ರೇಮವನ್ನು ಚಂದಗಾಣಿಸಲು ನಾನು ಇಷ್ಟು ಉತ್ಸುಕನಾಗಿರಲು ಕಾರಣವೇನು? ನೂರಾರು ಪ್ರೇಮಕತೆಗಳನ್ನು ಕೇಳಿದ್ದೇನೆ, ಓದಿದ್ದೇನೆ, ಬರೆದಿದ್ದೇನೆ. ಸ್ವಯಂ ಪ್ರೇಮವಿವಾಹವನ್ನೂ ಮಾಡಿಕೊಂಡಿದ್ದೇನೆ. ಈ ಹುಡುಗ ಹುಡುಗಿಯರ ಪ್ರೇಮ ಸ್ಥಾಯಿಗೊಳಿಸುವ ನನ್ನ ಕಿಂಚಿತ್ ಪ್ರಯತ್ನವು ಪ್ರೇಮದ ಬಗೆಗಿನ ನನ್ನ ನಿಲುವಿನ, ಒಲವಿನ ವಿಸ್ತರಣೆಯೇ ಆಗಿರಬಹುದು. ಪ್ರೀತಂನೋ ಶೈಲಳೋ ಆರೋಪಿಸದ್ದರಲ್ಲ, ಮಲೆನಾಡಿನ ಹುಡುಗಿ... ಕತೆಯನ್ನು ದುರಂತದಲ್ಲಿ ಮುಳುಗಿಸಿದಿರಿ, ಎಳೆಯ ಪ್ರೇಮಿಗಳನ್ನು ಅಗಲುವಂತೆ ಮಾಡಿದಿರಿ ಅಂತ. ಪ್ರೀತಂ–ಸುಮಿಯರ ಪ್ರೇಮವನ್ನು ಸಫಲಗೊಳಿಸಲು ಸಹಕರಿಸಿ ಆ ಪ್ರಮಾದದ ಆರೋಪದಿಂದ ಮುಕ್ತನಾಗಲು ಪ್ರಯತ್ನಿಸುತ್ತಿರುವೆನೇ?

ಹೋಟೆಲಲ್ಲೇ ಎಲ್ಲರೂ ಡಿನ್ನರ್ ಮಾಡೋಣ ಎಂದರೂ ಲಿಂಗಣ್ಣನವರು 'ಸುಮಿ ರೆಸ್ಟ್ ತಗೊಳ್ಳಲಿ. ಯಾಕೋ ನಿತ್ರಾಣ ಆಗ್ಯಾಳ. ಶೈಲು ತನ್ನ ಮನೆಗೆ ಕರೆದೊಯ್ತೇನೆ ಅಂದ್ಳು. ಹೂಂ ಅಂದೆ. ಇಬ್ರನ್ನೂ ಕಾರ್ ಮ್ಯಾಗ್ ತಲುಪ್ಸಕೆ ಡ್ರೈವರಗೆ ಹೇಳಿನ್ರೀ. ನಾವು ಜೊತೆಯಲ್ಲಿ ಊಟ ಮಾಡೋಣ್ರೀ. ನಮ್ ಮನಿಗೇ ಬಂದರೂ ನಿಮ್ಗೆ ಶಾಂತಿಯಿಂದ ಊಟ ಸೈತ ಹಾಕ್ಕೋಕಾಗಿಲ್ರೀ...' ಎಂದರು. ಲಿಂಗಣ್ಣನವರಿಗೆ ನಾಗತಿಹಳ್ಳಿ ಸರ್ ಜೊತೆ ಮಾತಾಡುವುದಿದೆ ಎನ್ನುವುದು ಪ್ರೀತಂನಿಗೆ ಅರಿವಾಗಿತ್ತು. ಬಹುಶಃ ಅದಕ್ಕೆ ಪೂರ್ವಭಾವಿಯಾಗಿ ಚಿಕ್ಕ ಗುಂಡು ಪಾರ್ಟಿಯ ಆಸೆಯೂ ಇದ್ದೀತು. ಹೀಗಾಗಿ ಅವನು 'ನನಗೆ ಹಸಿವಿಲ್ಲ. ಆಮೇಲೆ ರೂಮಿಗೇ ಊಟ ತರಿಸ್ಕೊಳ್ತೇನೆ' ಎಂದು ಮೇಲೆ ರೂಮಿಗೆ ಹೋದ. ನಾಗತಿಹಳ್ಳಿ ಸರ್ ಅವರ ಮುಗುಳ್ನಗು ಅವನನ್ನು ಹಿಂಬಾಲಿಸಿತ್ತು.

* * *

ಕಣ್ಣೆಲ್ಲಿ ಕಣ್ಣಿಟ್ಟು ಮಾತಾಡುವ ಪೈಕಿ ಅಲ್ಲದಿದ್ದರೂ ಲಿಂಗಣ್ಣನವರು ಅಷ್ಟು ಕೆಟ್ಟವರಂತೆ ಅನಿಸುತ್ತಿರಲಿಲ್ಲ. ಅಥವಾ ಅವರೀಗ ಪರಿವರ್ತನೆಯಾಗುತ್ತಿರುವ ಮನುಷ್ಯನೇ ಇರಬೇಕು. ಸುಮಿಯ ಅದೃಷ್ಟವೆಂದರೆ ಶೈಲತ್ತೆಯ ಪ್ರೇಮವನ್ನು ತಡೆಯುವಲ್ಲಿ ಲಿಂಗಣ್ಣನವರು ಗೆದ್ದೂ ಸೋತಿದ್ದರು. ಹೀಗಾಗಿ ಮಗಳ ಪ್ರೇಮದ ಖಬರ್ ತಿಳಿದಾಗ ಶಾಕ್ ಆದರೂ, ಶೈಲತ್ತೆಯ ಸಮಯದಲ್ಲಿದ್ದ ಉಗ್ರಪ್ರತಾಪ ತೋರಲಿಲ್ಲ. ಅದೇ ಆವೇಶದಲ್ಲಿ ಪ್ರೀತಿಯನ್ನು ವಿರೋಧಿಸುವ ತ್ರಾಣ ಈಗ ಅವರಲ್ಲಿ ಇರಲಿಲ್ಲ. ಹಾಗಂಥ ಅವರ ಮನಸ್ಸು ವಸ್ತುಸ್ಥಿತಿಯನ್ನು ಸ್ವೀಕರಿಸುವ ಪಕ್ವಸ್ಥಿತಿಗೂ ಬಂದಿರಲಿಲ್ಲ. ಯಾರಲ್ಲೂ, ಧರ್ಮಪತ್ನಿಯಲ್ಲೂ, ತುಮುಲಗಳನ್ನು ನಿವೇದಿಸಿಕೊಳ್ಳುವುದು ತಮ್ಮ ಘನತೆಗೆ ಧಕ್ಕೆಯಾದಂತೆ ಎಂಬ ಭಾವನೆ ಇತ್ತು. ಬಹುಶಃ ಅವರು ಒಳಗೊಳಗೇ ನವೆಯುತ್ತಿದ್ದರು. ಚಿತ್ತ ಕ್ಷೋಭೆಗೆ ಒಳಪಟ್ಟವರಂತೆ ಕಾಣುತ್ತಿದ್ದರು. ಅವರು ಈಗ ತೋರಿಸುತ್ತಿದ್ದ ದರ್ಪ ದೌಲತ್ತು ಅಹಂಕಾರಗಳು ಅವರಿಗೇ ಅಪರಿಚಿತವಾಗಿ ಕಾಣುತ್ತಿದ್ದವು. ತಮ್ಮ ವ್ಯಕ್ತಿತ್ವದಲ್ಲಾದ ಈ ಬಿರುಕನ್ನು ಬೇರೆಯವರಿಂದ ಮುಚ್ಚಿಡುವ ಹುಸಿ